
# ಕನ್ನಡ ಮತ್ತು ಸಾಮಾಜಿಕ ಸಮಾನತೆ

ಕನ್ನಡದ ಮುಖ್ಯ ಪ್ರಶ್ನೆಗಳು ಕನ್ನಡ ರಾಜ್ಯೋತ್ಸವದ ತಿಂಗಳಲ್ಲಿ ಮುನ್ನೆಲೆಗೆ ಬರುವ ವಾರ್ಷಿಕ ವಿಧಿಯಂತೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕೂಡ ಕನ್ನಡವನ್ನು ಕುರಿತ ಚರ್ಚೆ ಗಂಭೀರ ಸ್ವರೂಪವನ್ನು ತಾಳುತ್ತದೆ. ಇದು ಸಹಜ ಮತ್ತು ಸ್ವೀಕಾರಾರ್ಹ. ಪ್ರತಿಯೊಂದು ಸಮ್ಮೇಳನದ ಅಧ್ಯಕ್ಷರ ಭಾಷಣದಲ್ಲಿ ಕನ್ನಡವನ್ನು ಕುರಿತ ಕಾಳಜಿಗಳು ತುಂಬಿರುತ್ತವೆ. ಈ ಬಾರಿ ಸಮ್ಮೇಳನದ ಅಧ್ಯಕ್ಷತೆ ವಹಿಸಲು ನಿರಾಕರಿಸಿದ ದೇವನೂರ ಮಹಾದೇವ ಅವರು ಮುಂದಿಟ್ಟ ಕಾಳಜಿಗಳು, ಸಮ್ಮೇಳನಕ್ಕೆ ಮೊದಲೇ ನಾಡಿನಲ್ಲಿ ಚಿಂತನೆಯ ಕಿಡಿಯನ್ನು ಹೊತ್ತಿಸಿವೆ. ಶಿಕ್ಷಣದ ಭಾಷೆ ಮತ್ತು ಸಮಾನತೆಗೆ ಇರುವ ಸಂಬಂಧವನ್ನು ಅವರು ಮತ್ತೊಮ್ಮೆ ವಿಶ್ಲೇಷಿಸಿದ್ದಾರೆ.



ಶ್ರೀಕಂಠ ಮೂರ್ತಿ ಎಂ.ಎಸ್.

ಹಿಂದೆ ನಮ್ಮ ದೇಶ ಶೂದ್ರ ಸಮುದಾಯಕ್ಕೆ ಶಿಕ್ಷಣವನ್ನು ನಿರಾಕರಿಸಿತ್ತು. ಆದರೆ ಈಗ ನಮ್ಮ ದೇಶ 'ಶಿಕ್ಷಣದೊಳಗೇ ಜಾತಿ–ವರ್ಗ ರೋಗದ ಪಂಚವರ್ಣ ಪದ್ಧತಿ ಅಳವಡಿಸಿಕೊಂಡಿದೆ. ಚಾತುರ್ವರ್ಣದ ಸ್ವಭಾವವಾದ ಪ್ರತ್ಯೇಕತೆ, ತಾರತಮ್ಯ ಉಳಿಸಿಕೊಂಡಿದೆ... ಸಮಾನ ಶಿಕ್ಷಣ ಅನುಷ್ಠಾನ ಮಾಡದಿದ್ದರೆ ಶಿಕ್ಷಣವೇ ಸಾಮಾಜಿಕ ಪ್ರತ್ಯೇಕತೆ ಮತ್ತು ವರ್ಗಗಳನ್ನು ಹೆಚ್ಚಿಸಿ ಮತ್ತಷ್ಟು ಕಂದರ ಉಂಟು ಮಾಡುತ್ತದೆ ಎಂಬ ಮಾತು ನಮ್ಮೆದುರು ಇದ್ದೂ ಕೂಡಾ ಭಾರತ ಪಂಚವರ್ಣ ಶಿಕ್ಷಣವನ್ನು ನೀಡುತ್ತಿರುವುದು ಏನನ್ನು ಹೇಳುತ್ತದೆ? ಬಹುಶಃ ಭಾರತಕ್ಕೆ ತಾರತಮ್ಯ, ಪ್ರತ್ಯೇಕತೆ, ಮೇಲುಕೀಳು ಇಲ್ಲದಿದ್ದರೆ ನಿದ್ದೆ ಬರುವುದಿಲ್ಲವೇನೋ?' ಎಂಬ ಅವರ ಆತಂಕದ ಮಾತುಗಳು ನಮ್ಮ ಸಾಮಾಜಿಕ ಪರಂಪರೆಯ ಹಿನ್ನೆಲೆಯಲ್ಲಿ ಬಹಳ ಪ್ರಾಮುಖ್ಯ ಪಡೆಯುತ್ತವೆ.

ಭಾಷೆಯನ್ನು ಅಸಮಾನತೆಯ ಅಸ್ತ್ರವಾಗಿ ಬಳಸುವ ಹಳೆಯ ಹುನ್ನಾರದ ವಿರುದ್ಧ ಹೊಸ ಹೋರಾಟ ಅಗತ್ಯ ಮತ್ತು ಕನ್ನಡ ಮಾಧ್ಯಮ ಜಾರಿಯ ಒತ್ತಾಯಕ್ಕೆ ಶಿಕ್ಷಣದ ಉನ್ನತೀಕರಣದ ಕನಸು ಇರಬೇಕು ಎಂಬ ದೇವನೂರರ ಈ ಕಳಕಳಿ, ಸಮ್ಮೇಳನಾಧ್ಯಕ್ಷ ಡಾ. ಸಿದ್ಧಲಿಂಗಯ್ಯ ಅವರೂ ಸೇರಿದಂತೆ ಎಲ್ಲ ಕನ್ನಡಿಗರ ಎದೆಗೆ ಬೀಳುವ ಆಶಯವಾಗಲಿ.

–ಆರ್. ಪೂರ್ಣಿಮಾ